ಅ) ನಿಜವಲ್ಲ

ಇ) ಪ್ರಶ್ನೆ (ಅ) ಮತ್ತು (ಆ) ಗೆ ನೀಡಿದ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) - ಅದೇ-

ಉ) - ಅದೇ -

ಊ) - ಅದೇ -

ರಾಜ್ಯದಲ್ಲಿ ಎ.ಪಿ.ಡಿ.ಪಿ. ಕಾರ್ಯಕ್ರಮ

9(32) - ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಪಿಡಿಪಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆಯೇ?

ಆ) ಹಾಗಿದ್ದಲ್ಲಿ, ಇದರ ವಿವರಗಳೇನು?

ಇ) ಮಂಡ್ಯ ವಿಧಾನ ಸಭಾ ಕ್ಷೇತ್ರದಲ್ಲಿ ಕಾಮಗಾರಿಯ ಈವರವಿಗಿನ ಪ್ರಗತಿಯ ವಿವರಗಳೇನು?

ಶ್ರೀ ಬಸವರಾಜ ಹೆಚ್ ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ಹೌದು.

ಆ) ಕರ್ನಾಟಕ ರಾಜ್ಯದಲ್ಲಿ ಮೈಸೂರು , ಬೆಳಗಾಂ, ಬಿಜಾಪುರ ಮತ್ತು ಹುಬ್ಬಳ್ಳಿ ವೃತ್ತಗಳಿಗೆ ಎ.ಪಿ.ಡಿ.ಆರ್.ಪಿ. ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಮೈಸೂರು ಬೆಳಗಾಂ, ಬಿಜಾಪುರ, ವೃತ್ತದ ಎ.ಪಿ.ಡಿ.ಆರ್.ಪಿ ಕಾರ್ಯಕ್ರಮಗಳಿಗೆ ಯೋಜನಾ ವರದಿಗಳು ರೂ. 279.04 ಕೋಟಿಗೆ ಮಂಜೂರಾತಿ ದೊರೆಕಿದ್ದು ಈಗಾಗಲೇ ಕಾಮಗಾರಿಗಳನ್ನು ಟರ್ನ್ ಕೀ ಕನಿಷ್ಠ ಟೆಂಡರ್‌ದಾರರಿಗೆ ಮಹಿಸಲಾಗಿದೆ. ಮೈಸೂರು ವೃತ್ತದ ಕಾಮಗಾರಿಗಳು ಆಗಸ್ಟ್ ಮಾಹೆಯಲ್ಲಿ ಸಂಪೂರ್ಣವಾಗುವ ಸಾಧ್ಯತೆಯಿದೆ. ಬಾಕಿ ಉಳಿದ ಬೆಳಗಾಂ, ಬಿಜಾಪುರ ವೃತ್ತದ ಎಂ.ಪಿ.ಡಿ.ಆರ್.ಪಿ. ಕಾರ್ಯಕ್ರಮಗಳು ಮೇ 2002 ರಿಂದ ಪ್ರಾರಂಭವಾಗಿದ್ದು, ವರ್ಷದ ಅಂತ್ಯದೊಳಗೆ ಪೂರ್ಣವಾಗುವ ಸಾಧ್ಯತೆಗಳಿವೆ.

ಇ) ಮಂಡ್ಯ ವಿಧಾನ ಸಭಾ ಕ್ಷೇತ್ರದಲ್ಲಿ ಎ.ಪಿ.ಡಿ.ಆರ್.ಪಿ. ಕಾರ್ಯಕ್ರಮದಡಿ ವಿದ್ಯುತ್ ವ್ಯವಸ್ಥೆ ಸುಧಾರಣೆಯ ಬಗ್ಗೆ ಹಮ್ಮಿಕೊಂಡ ಗುರಿ ಹಾಗೂ ಸಾಧನೆ ಇವುಗಳ ವಿವರಗಳು ದಿನಾಂಕ 31-5-2002 ರಲ್ಲಿದ್ದಂತೆ, ಕೆಳಕಂಡಂತಿವೆ.

1. 132 ಸಂಖ್ಯೆಯ ಹೊಸ ಪರಿವರ್ತಕ ಕೇಂದ್ರಗಳ ಸ್ಥಾಪನೆಯ ಗುರಿಯ ಪೈಕಿ 9 ಪರಿವರ್ತಕಗಳ ಕಾಮಗಾರಿ ಕೆಲಸ ಮುಗಿದಿದೆ, ಹಾಗೂ 92 ಪರಿವರ್ತಕಗಳ ಕೆಲಸ ಪ್ರಗತಿಯಲ್ಲಿದೆ.

2. 67.17 ಕಿ.ಮೀ. 11 ಕೆ.ವಿ. ಮಾರ್ಗದ ವಿಸ್ತರಣೆಯ ಗುರಿ ಪೈಕಿ, 4.1 ಕಿ.ಮೀ.ಗಳ ಕೆಲಸ ಮುಗಿದಿದ್ದು, 44.8 ಕಿ.ಮೀ.ಗಳ ಕೆಲಸ ಪ್ರಗತಿಯಲ್ಲಿದೆ.

3. 10.54 ಕಿ.ಮೀ. ಎಲ್.ಟಿ.ಮಾರ್ಗದ ವಿಸ್ತರಣೆಯ ಗುರಿಯ ಪೈಕಿ, 1.2. ಕಿ.ಮೀ ಗಳ ಕೆಲಸ ಪ್ರಗತಿಯಲ್ಲಿದೆ.

4) 4 ಕಿ.ಮೀ. ಉದ್ದದ ಎಕ್ಸ್‌ಪ್ರೆಸ್ ಲೈನಿನ ನಿರ್ಮಾಣದ ಗುರಿಯನ್ನು ಈಗಾಗಲೇ ಸಾಧಿಸಿದ್ದು, ಕೆಲಸ ಪೂರ್ಣಗೊಂಡಿದೆ.

5) 9.3 ಕಿ.ಮೀ. ಗಳ ಉದ್ದದ 11 ಕೆ.ವಿ. ಮಾರ್ಗದ ಪುನರ್ವಾಹಕಗೊಳಿಸುವ ಗುರಿ ಹೊಂದಿದ್ದು, 3 ಕಿ.ಮೀ.ಗಳ ಕೆಲಸ ಮುಗಿದಿದೆ.

ಮಂಡ್ಯ ನಗರದಲ್ಲಿ ವಾಣಿಜ್ಯ ಸಂಕೀರ್ಣಗಳು

10(34) - ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ವಾಣಿಜ್ಯ ಸಂಕೀರ್ಣಗಳಿಗೆ ಅನುಮತಿ ನೀಡಬೇಕಾಗಿದ್ದಲ್ಲ ಪಾಲಿಸಬೇಕಾದ ನಿಯಮಗಳನ್ನು ಅನುಸರಿಸಲಾಗುತ್ತಾ ಇದೆಯೇ?

ಆ) ಹಾಗಿದ್ದಲ್ಲಿ, ಅದರ ವಿವರಗಳೇನು?

ಇ) 2001-02ನೇ ಸಾಲಿನಲ್ಲಿ ಒಟ್ಟು ಪರವಾನಿಗೆ ನೀಡಿದ ವಾಣಿಜ್ಯ ಸಂಕೀರ್ಣಗಳೆಷ್ಟು?

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ರಾಜ್ಯ ಸಚಿವರು)

ಅ) ಹೌದು.

ಆ) ವ್ಯಾಪಕಾಭಿವೃದ್ಧಿ ಯೋಜನೆ (ಸಿ.ಡಿ.ಪಿ) ಅಡಿಯಲ್ಲಿ ವಾಣಿಜ್ಯ ವಲಯದಲ್ಲಿ ಬರುವಂತಹ ಎಲ್ಲಾ ಜಮೀನಿನಲ್ಲಿ ವಾಣಿಜ್ಯ ಕಟ್ಟಡಗಳನ್ನು ಕಟ್ಟಲು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ 1961 ರ ಕಲಂ (14) ಮತ್ತು (15)ರ ಪ್ರಕಾರ ಅನುಮತಿ ನೀಡಲಾಗುತ್ತಿದೆ.

ಇ) 6 ವಾಣಿಜ್ಯ ಸಂಕೀರ್ಣಗಳು

ಮಂಡ್ಯ ನಗರದಲ್ಲಿ ಕುಡಿಯುವ ನೀರಿನ ವ್ಯವಸ್ಥೆ

11(36) - ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಮಂಡ್ಯ ನಗರದಲ್ಲಿನ ಕುಡಿಯುವ ನೀರಿನ ವ್ಯವಸ್ಥೆಯ ವಿತರಣಾ ಜಾಲವನ್ನು ಬಲಪಡಿಸಿ, ಆಧುನೀಕರಣ ಕಾಮಗಾರಿಯನ್ನು ಕೈಗೊಳ್ಳುವ ಅವಶ್ಯಕತೆಯನ್ನು ಸರ್ಕಾರ ಮನಗಂಡಿದೆಯೇ?